# ಅಭಿಷೇಕ್ ಗೇಮ್‌ಪ್ಲಾನ್



ವಿಶ್ವಕಪ್ ಕ್ರಿಕೆಟ್ ಸಿನಿಮಾಗಳಿಗೆ ಹೊಡೆತ ನೀಡುತ್ತಿದೆಯೆ.. ಎಂಬ ಚರ್ಚೆ ಬಾಲಿವುಡ್‌ನಲ್ಲೂ ನಡೆಯುತ್ತಿದೆ. ಹಲವು ನಿರ್ಮಾಪಕರು ಈ ಬಗ್ಗೆ ಆತಂಕ ವ್ಯಕ್ತಪಡಿಸಿದರೂ ನಟ ಅಭಿಷೇಕ್ ಬಚ್ಚನ್ ಈ ವಾದವನ್ನು ಒಪ್ಪುತ್ತಿಲ್ಲ. 'ಕ್ರಿಕೆಟ್ ಅದರ ಪಾಡಿಗೆ ಅದು ನಡೆಯುತ್ತಿದೆ. ಸಿನಿಮಾಗಳು ಅವುಗಳ ಪಾಡಿಗೆ ಅವು ಓಡುತ್ತವೆ' ಎನ್ನೋದು ಅಭಿ ವಾದ.

'ಒಳ್ಳೆಯ ಸಿನಿಮಾ ಮಾಡಿದರೆ ಜನ ನೋಡೇ ನೋಡುತ್ತಾರೆ. ಯಾವುದೇ ಚಿತ್ರದ ಬಗ್ಗೆ ಪ್ರಚಾರದ ಮೂಲಕ ಜನರಲ್ಲಿ ನಿರೀಕ್ಷೆ ಹುಟ್ಟಿಸಬೇಕು. ಹಾಗಾದಾಗ ಜನ ಥಿಯೇಟರ್‌ಗೆ ಬಂದೇ ಬರುತ್ತಾರೆ. ನೂರು ಕೋಟಿ ಭಾರತೀಯರಲ್ಲಿ ಎಲ್ಲರೂ ಟಿವಿ ಮುಂದೆ ಕುಳಿತಿರೋದಿಲ್ಲ. 50 ಕೋಟಿ ಮಂದಿ ಕುಳಿತಿದ್ದಾರೆ ಎಂದುಕೊಂಡರೂ ಉಳಿದ 50 ಕೋಟಿ ಜನ ಬರಲ್ವೆ?' ಎನ್ನುತ್ತಾರೆ ಅಭಿ.

ಅಂದ ಹಾಗೆ ಅಭಿಷೇಕ್ ಬಚ್ಚನ್ ನಟಿಸಿದ ಎರಡು ಚಿತ್ರಗಳು ವಿಶ್ವಕಪ್ ಕ್ರಿಕೆಟ್‌ಗೆ ಸೆಡ್ಡು ಹೊಡೆದು ಬಿಡುಗಡೆಗೆ ತಯಾರಾಗಿ ನಿಂತಿವೆ. ಅದರಲ್ಲಿ ಮೊದಲನೆಯದು ಗೇಮ್. ಏಪ್ರಿಲ್ 1ರಂದು ಗೇಮ್ ಬಿಡುಗಡೆಯಾಗಲಿದೆ. ಏಪ್ರಿಲ್ 22ರಂದು ಅಭಿಷೇಕ್ ಅಭಿನಯದ 'ಧಮ್ ಮಾರೊ ಧಮ್' ಬಿಡುಗಡೆಯಾಗಲಿದೆ. 'ಗೇಮ್ ಚಿತ್ರದ ಬಗ್ಗೆ ನನಗೆ ಸಾಕಷ್ಟು ನಿರೀಕ್ಷೆಗಳಿವೆ. ಏಕೆಂದರೆ ಅದರಲ್ಲಿ ಇದೇ ಮೊದಲ ಬಾರಿಗೆ ನನ್ನ ನಿಕಟ ಸ್ನೇಹಿತರಾದ ಫರ್ಹಾನ್ ಅಖ್ತರ್ ಮತ್ತು ರಿತೇಶ್ ಸಿದ್ವಾನಿ ಅಭಿನಯಿಸಿದ್ದಾರೆ' ಎನ್ನುತ್ತಾನೆ ಅಭಿ.

ಕ್ರಿಕೆಟ್ ಕೂಡಾ ಒಂದು ಗೇಮ್ ತಾನೆ? ಅಭಿಯ ಗೇಮ್‌ಪ್ಲಾನ್ ಸಕ್ಸೆಸ್ ಆಗುತ್ತದೆಯೋ ಎಂದು ಕಾದು ನೋಡಬೇಕು!

## ಮತ್ತೆ ಗೋಲ್‌ಮಾಲ್!

ನಿರ್ದೇಶಕ ರೋಹಿತ್ ಶೆಟ್ಟಿಗೆ ಪುರುಸೊತ್ತೇ ಇಲ್ಲ. ಗೋಲ್‌ಮಾಲ್-4 ತೆರೆಗೆ ತರಲು ಆತ ನಿರ್ಧಾರ ಮಾಡಿದ್ದಾನೆ! ಬಹುಶಃ ಬಾಲಿವುಡ್ ಮಟ್ಟಿಗೆ ಇದೊಂದು ದಾಖಲೆಯೇ ಆಗಬಹುದು. ಒಂದೇ ಚಿತ್ರ ಯಶಸ್ವಿಯಾಗಿ ಹೀಗೆ ಭಾಗ-4ರವರೆಗೆ ಮುಂದುವರಿದಿರುವುದು ನೋಡಿದರೆ ಭಾಗ 5 ಮತ್ತು 6 ಕೂಡಾ ಬರಬಹುದು ಅನ್ನಿಸುತ್ತೆ.





ಮೊದಲ ಬಾರಿಗೆ ಗೋಲ್‌ಮಾಲ್ ತೆರೆಗೆ ಬಂದದ್ದು 2006ರಲ್ಲಿ. ಅದರ ಸೂಪರ್ ಯಶಸ್ಸಿನ ಹಿನ್ನೆಲೆಯಲ್ಲಿ 2008ರಲ್ಲಿ 'ಗೋಲ್‌ಮಾಲ್ ರಿಟರ್ನ್ಸ್' ಚಿತ್ರ ಬಂತು. ಅದೂ ಚೆನ್ನಾಗಿ ದುಡ್ಡು ದೋಚಿತು. ಕಳೆದ ವರ್ಷ ಗೋಲ್‌ಮಾಲ್-3 ತೆರೆ ಕಂಡಾಗಲೂ ಯಶಸ್ಸಿನ ಸರಣಿ ಮುಂದುವರಿಯಿತು.

ಆದರೆ ಗೋಲ್‌ಮಾಲ್-4 ಈ ವರ್ಷ ತೆರೆಗೆ ಬರುವುದಿಲ್ಲ ಎನ್ನುವುದಂತೂ ಖಚಿತ. ಅಭಿಮಾನಿಗಳು ಅದಕ್ಕಾಗಿ ಇನ್ನೂ ಎರಡು ವರ್ಷ ಕಾಯಬೇಕಂತೆ. 'ಜನ ಕಾಯಬೇಕು. ಆಗಲೇ ಹಾಸ್ಯದ ಮಜಾ ಹೆಚ್ಚುವುದು' ಎನ್ನುವುದು ರೋಹಿತ್ ಮಾತು. ಸದ್ಯಕ್ಕೆ 'ಅಂಗೂರ್' ಚಿತ್ರದ ರಿಮೇಕ್ ಮಾಡುವಲ್ಲಿ ರೋಹಿತ್ ಬ್ಯುಸಿ. ಅದರಲ್ಲಿ ಶಾರೂಕ್ ನಾಯಕ. ಆ ಬಳಿಕ ಅಜಯ್ ದೇವಗನ್, ಅಭಿಷೇಕ್ ನಟಿಸುವ 'ಬೋಲ್ ಬಚ್ಚನ್' ಎಂಬ ಸಿನಿಮಾ ಮುಗಿಯಬೇಕು. 'ಆ ಬಳಿಕವೇ ಇನ್ನೊಂದು ಗೋಲ್‌ಮಾಲ್' ಎನ್ನುತ್ತಾನೆ ಆತ.



## ರಾಖಿ ಟೀಚರ್

ರಾಖಿ ಸಾವಂತ್ ಟೀಚರ್ ಪಾತ್ರ ಮಾಡುತ್ತಾಳಂತೆ. 'ಕಸಂ ಸೆ ಕಸಂ ಸೆ' ಎನ್ನುತ್ತಾರೆ ನಿರ್ದೇಶಕ ಅಶ್ಫಾಕ್ ಮಕ್ವಾನಿ. ಅದು ಚಿತ್ರದ ಟೈಟಲ್ ಕೂಡಾ. ಆದರೆ ಈ ಟೀಚರ್ ಸಾಮಾನ್ಯ ಶಾಲೆಯ ಟೀಚರ್ ಅಲ್ಲ; ಹಾಗೆಯೇ ಆಕೆ ಮಾಡುವ ಪಾತ್ರ ಕೂಡಾ ಸಾಮಾನ್ಯವಲ್ಲ. ಚಿತ್ರದಲ್ಲಿ ರಾಖಿ ಸೆಕ್ಸ್ ಎಜುಕೇಶನ್ ಕಲಿಸುವ ಶಿಕ್ಷಕಿಯಂತೆ! ಸಾಮಾನ್ಯ ಟೀಚರ್ ಪಾತ್ರ ಮಾಡುವಾಗಲೇ ಯರ್‍ರಾಬಿರ್‍ರಿ ಹೆಂಡ ಕುಡಿದಂತೆ ನಟಿಸುವ ರಾಖಿ ಇನ್ನು ಲೈಂಗಿಕ ಶಿಕ್ಷಕಿಯ ಪಾತ್ರ ವಹಿಸಿದರೆ ಕೇಳಬೇಕೆ? ಥಿಯೇಟರ್‌ನಲ್ಲಿ ಸೇರುವ ಪೋಲಿ ಪ್ರೇಕ್ಷಕರು ಹೆಂಡ ಕುಡಿದ ಕೋತಿಯಂತೆ ಆಡದಿದ್ದರೆ ಸಾಕು!

■ ಬಿಂದು